ಶ್ರೀ ಜಿ. ನಾರಾಯಣಗೌಡ.—ಈ ಫೀಡರ್ ನಾಲೆಯ ಅಂದಾಜು ಎಷ್ಟಕ್ಕೆ ಆಗಿದೆ?

*ಶ್ರೀ ಎಚ್. ಎಂ. ಚನ್ನಬಸಪ್ಪ.—17,500 ರೂಪಾಯಿಗಳಿಗೆ ಆಗಿದೆ.

ಶ್ರೀ ಜಿ. ನಾರಾಯಣಗೌಡ.—ಈ ಕೆರೆಯ ಅಚ್ಚು ಕಟ್ಟು ಎಷ್ಟು?

ಶ್ರೀ ಎಚ್. ಎಂ. ಚನ್ನಬಸಪ್ಪ.—243 ಎಕರೆಗಳು.

ಶ್ರೀ ಜಿ. ನಾರಾಯಣಗೌಡ.—ತಾವು ಹೀಗೆ ಕೆಲಸಕ್ಕೆ ಆಗತಕ್ಕ ಖರ್ಚು ಬಹಳ ದುಬಾರಿ ಎಂಬ ಅಂಶವನ್ನು ಯಾವ ಆಧಾರದ ಮೇಲೆ ಹೇಳೋಣವಾಗಿದೆ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಆ ಕೆರೆಯ ಬಡಾವಣೆಯಿಂದ ಹೆಚ್ಚಾಗತಕ್ಕ ನೀರು ಕೇವಲ 7 ಯೂನಿಟ್ ಮಾತ್ರ. ಆದುದರಿಂದ ಪ್ರತಿ ಯೂನಿಟ್ ನೀರಿಗೂ 2,500 ರೂಪಾಯಿಗಳು ಖರ್ಚಾದ ಹಾಗೆ ಆಗುತ್ತದೆ. ಆದ್ದರಿಂದ ಇದು ದುಬಾರಿ ಎಂದು ತಿಳಿಸಿದೆ.

ಶ್ರೀ ಜಿ. ನಾರಾಯಣಗೌಡ.—ಇದನ್ನು ರಿಪೇರಿ ಮಾಡಿದರೆ 7 ಯೂನಿಟ್ ನೀರಿಗಿಂತಲೂ ಹೆಚ್ಚು ನೀರು ನಿಲ್ಲಲು ಅವಕಾಶವಿಲ್ಲವೆ? ಹಾಗೇನಾದರೂ ಅವಕಾಶವಿದೆಯೇ, ಇಲ್ಲವೇ ಎಂಬುದನ್ನು ಪುನಃ ಇಲಾಖೆಯವರಿಂದ ಪರಿಶೀಲನೆ ಮಾಡಲು ಆಜ್ಞೆ ಮಾಡುತ್ತೀರಾ?

ಶ್ರೀ ಎಚ್. ಎಂ. ಚನ್ನಬಸಪ್ಪ.—ತಾವು ಹೇಳುವ ರೀತಿಯಲ್ಲಿ ಏನಾದರೂ ಹೆಚ್ಚು ನೀರು ಬರುತ್ತದೆಂದು ತಾವು ಹೇಳಿದಲ್ಲಿ ಆ ರೀತಿ ಪುನಃ ಪರಿಶೀಲನೆ ಮಾಡಿಸಲು ನಮ್ಮ ಅಭ್ಯಂತರವೇನೂ ಇಲ್ಲ.

ಶ್ರೀ ಎಸ್. ಸಿದ್ದಪ್ಪ.—ಇಂಥ ಅಭಾವ ಪ್ರದೇಶಗಳಲ್ಲಿ ರೈತರಿಗೆ ಅನುಕೂಲ ಒದಗಿಸುವ ದೃಷ್ಟಿಯಿಂದ ಸ್ವಲ್ಪ ಹೆಚ್ಚಿಗೆ ಖರ್ಚಾದರೂ ಅದನ್ನು ಕೈಗೊಳ್ಳುವುದು ಉತ್ತಮವಲ್ಲವೆ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಈ ಮಾನ್ಯ ಸಭೆ ಅದಕ್ಕೆ ಒಪ್ಪುವುದಾದರೆ ಆಗಬಹುದು.

ಶ್ರೀ ಎಸ್. ಸಿದ್ದಪ್ಪ.—ಇಂಥ ಕಾರ್ಯಗಳನ್ನು ತಾವು ನಂಸ್ಥಾನದಲ್ಲಿ ಇನ್ನೆಲ್ಲಿಯೂ ಕೈಗೊಂಡಿಲ್ಲವೇ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಹೀಗೆ ಒಂದು ಯೂನಿಟ್ ನೀರಿಗೆ 2,500 ರೂಪಾಯಿಗಳನ್ನು ಖರ್ಚು ಮಾಡಿರತಕ್ಕ ನಿದರ್ಶನಗಳಿರುತ್ತವೆಯೇ ಎಂಬುದನ್ನು ಪರಿಶೀಲನೆ ಮಾಡಿ ನೋಡಬೇಕು.

Tanks in Chiknayakanahalli Taluk (repairs of breaches)

Q.—630. Sri C. H. LINGADEVARU (Chiknayakanahalli).—

Will the Government be pleased to state :—

(*a*) the tanks in Chikayakanahalli Taluk that breached on account of heavy rains during the years 1953 and 1954 ;

(*b*) of these, the tanks that have been repaired ;

(*c*) the estimated cost of each ?

A.—Sri H. M. CHANNABASAPPA (Minister for Industries).—

(*a*) (*b*), and (*c*) —

Name of Tank	*Estimated Cost* Rs.
(1) Kenkere Narasammanakere	7,150*
(2) Soralamavu Doddakere	...11,000*
(3) Gopalapura tank	...40,000†

Remarks
*Work completed
†Nearing completion

No tank was breached during 1954.

ಶ್ರೀ ಸಿ. ಎಚ್. ಲಿಂಗದೇವರು.—ತಾವು ಇಲ್ಲಿ ಒದಗಿಸಿರುವ ಉತ್ತರದಲ್ಲಿ ಈ (2)ನೆಯ ಐಟಂನಲ್ಲಿ ಕಂಡಂತೆ ೇರಮಾವು ದೊಡ್ಡಕೆರೆಗೆ 11,000 ರೂಪಾಯಿಗಳ ಕಾಮಗಾರಿ ನಡೆದು ಕೆಲಸ ಮುಗಿದಿದೆ ಎಂದು ಹೇಳೋಣವಾಗಿದೆ. ತಾವು ಈ ಕೆಲಸವನ್ನು ಸ್ವತಃ ಪರೀಕ್ಷೆಮಾಡಿ ಈ ಉತ್ತರ ಒದಗಿಸಿದ್ದೀರಾ?

*ಶ್ರೀ ಎಚ್. ಎಂ. ಚನ್ನಬಸಪ್ಪ.—ಸರ್ಕಾರಕ್ಕೆ ಬಂದಿರುವ ವರದಿಯ ಪ್ರಕಾರ ಮೂರು ಕೆಲಸಗಳ ಪೈಕಿ ಎರಡು ಮುಗಿದು-ಇನ್ನೊಂದು ಮುಗಿಯುವುದರಲ್ಲಿದೆ ಎಂದು ನಮೂದಿಸಲಾಗಿದೆ.

ಶ್ರೀ ಸಿ. ಎಚ್. ಲಿಂಗದೇವರು.—ಈ ಕೆಲಸವಿನ್ನೂ ಮುಗಿದಿಲ್ಲವೆಂದು ಹೇಳಿದರೆ ತಾವು ಒಪ್ಪಿಕೊಳ್ಳುತ್ತೀರಾ? ಈ ಉತ್ತರ ತಪ್ಪಿದ್ದರೆ ಇದಕ್ಕೆ ಯಾರು ಜವಾಬ್ದಾರರು?

ಶ್ರೀ ಎಚ್. ಎಂ. ಚನ್ನಬಸಪ್ಪ.—ತಪ್ಪೆಂದು ನಾನು ಒಪ್ಪಿಕೊಳ್ಳಲಾರೆ. ಪುನಃ ಈ ವಿಚಾರವನ್ನು ಪರಿಶೀಲನೆ ಮಾಡಿಸುತ್ತೇನೆ.

ಶ್ರೀ ಸಿ. ಎಚ್. ಲಿಂಗದೇವರು.—ಈ ಕೆರೆ ಒಡೆದಾಗ ಎಷ್ಟು ಎಕರೆ ಜಮೀನು ಕೊಚ್ಚಿಹೋಯಿತು?

ಶ್ರೀ ಎಚ್. ಎಂ. ಚನ್ನಬಸಪ್ಪ.—ನೋಟೀಸ್.

ಶ್ರೀ ಸಿ. ಎಚ್. ಲಿಂಗದೇವರು.—ಅಲ್ಲಿ ಕೆಲಸ ಪೂರೈಸದೆ ಇದ್ದರೂ ಹೀಗೆ ತಪ್ಪು ಉತ್ತರ ಕಳುಹಿಸಿರುವುದರಿಂದ ತಾವು ಮತ್ತೊಮ್ಮೆ ಇದರ ಬಗ್ಗೆ ಒಂದು ಪ್ರತ್ಯೇಕ ವರದಿ ತರಿಸುತ್ತೀರಾ?

Sri H. M. CHANNABASAPPA.—It is perfectly proper and correct. If the Hon'ble Member feels doubtful about it, I have no objection to verify it. I am again telling you that it is correct.

ಶ್ರೀ ಸಿ. ಎಚ್. ಲಿಂಗದೇವರು.—ಈ ಅಧಿವೇಶನದಲ್ಲೇ ತರಿಸಿಕೊಂಡು ಮತ್ತೆ ಈ ಪ್ರಶ್ನೆಗೆ ಇಲ್ಲಿ ಅವಕಾಶ ಕೊಡುತ್ತೀರಾ?

Sri H. M. CHANNABASAPPA.—I have already answered that I have no objection to verify.

Mr. SPEAKER.—That information can be furnished.

---

* Indicates that the remarks or speeches have not been revised by the Member concerned.

Sri H. M. CHANNABASAPPA.—I will furnish the information to the Hon'ble Member.

High level causeway across Arkavathi near Varthur.

Q.—610. Sri S. SIDDAPPA (Magadi).—

Will the Government be pleased to state :—

(*a*) whether an estimate for the construction of a high level causeway across the Arkavati river flowing near Varthur, Tavarekere Hobli, Magadi Taluk has been prepared ;

(*b*) if so, the amount of the estimate ;

(*c*) when the work will be completed ?

A.—Sri H. M. CHANNABASAPPA (Minister for Industries).—

(*a*) Yes ; for a bridge ;

(*b*) Rs. 74,000.

(*c*) After sanction to the estimate.

ಶ್ರೀ ಎಸ್. ಸಿದ್ದಪ್ಪ.—ಈ ಸೇತುವೆ ಕೆಲಸವನ್ನು ಯಾವಾಗ ಪೂರ್ಮೆನುತ್ತೀರಿ ?

*ಶ್ರೀ ಎಚ್. ಎಂ. ಚನ್ನಬಸಪ್ಪ.—ಅದರ ಅಂದಾಜು ಇನ್ನೂ ಮಂಜೂರಾಗಿಲ್ಲ ಅದು ಮಂಜೂರಾದ ಮೇಲೆ ತಾವು ಈ ಪ್ರಶ್ನೆ ಕೇಳಿದರೆ ಒಳ್ಳೆಯದು.

ಶ್ರೀ ಎಸ್. ಸಿದ್ದಪ್ಪ.—ಈ ಕೆಲಸವನ್ನು ತಾವು ಆದಷ್ಟು ಜಾಗ್ರತೆ ಮುಗಿಸಲು ಪ್ರಯತ್ನ ಮಾಡುತ್ತೀರೆಂದು ನಂಬೋಣವೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಇದೊಂದು ಬಹಳ ಮುಖ್ಯವಾದ ಸೇತುವೆ. ಇದನ್ನು ಆದಷ್ಟು ಬೇಗ ಕೈಗೊಳ್ಳಬೇಕೆಂಬ ಆಸೆ ಸರ್ಕಾರಕ್ಕೂ ಇದೆ.

ಶ್ರೀ ಡಿ. ಎಂ. ಗೋವಿಂದರಾಜು.—ಇದರ ಅಂದಾಜು ತಯಾರಾದದ್ದು ಯಾವಾಗ ?

ಶ್ರೀ ಎಚ್. ಎಂ. ಚನ್ನಬಸಪ್ಪ.—1955ನೆಯ ಫೆಬ್ರುವರಿಯಲ್ಲಿ.

ಶ್ರೀ ಡಿ. ಎಂ. ಗೋವಿಂದರಾಜು.—ಅಷ್ಟಾಗಿದ್ದರೂ ಇನ್ನೂ ಇದು ಮಂಜೂರಾಗಿಲ್ಲವೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಮೊದಲು ಒಂದು ಅಂದಾಜು ತಯಾರಾಯಿತು. ಅದನ್ನು ಸ್ಕ್ರುಟಿನಿ ಮಾಡಲು ಸರ್ಕಾರಕ್ಕೆ ಕಳುಹಿಸುವ ಮುನ್ನ ಸೂಪರಿಟೆಂಡಿಂಗ್ ಇಂಜನಿಯರ್ ಅವರಿಗೆ ಕಳುಹಿಸಲಾಗಿತ್ತು. ಅಲ್ಲಿ ಅವರು ಕೆಲವು ಅಬ್‌ಸರ್ವೇಷನ್‌ಗಳನ್ನು ಹಾಕಿ ಈಗ ಅದನ್ನು ಪುನಃ ಎಗ್ಸಿಕ್ಯೂಟೀವ್ ಇಂಜಿನಿಯರವರಿಗೆ ಕಳುಹಿಸಿರುತ್ತಾರೆ.

ಶ್ರೀ ಯು. ಎಂ. ಮಾದಪ್ಪ.—ಒಂದು ಒಡ್ಡು ದಾರಿಗೆ 74,000 ರೂಪಾಯಿಗಳು ಖರ್ಚಾಗುತ್ತದೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಪ್ರಶ್ನೆಯಲ್ಲಿ ತಪ್ಪಾಗಿ ಕೇಳಿದ್ದಾರೆ. ಅದನ್ನು ಸರಿಪಡಿಸಿ ಸೇತುವೆಗಾಗಿ ಅಷ್ಟು ಹಣ ಖರ್ಚಾಗುತ್ತದೆಂದು ಉತ್ತರ ಕೊಡಲಾಗಿದೆ.

Industries in Davanagere and Harihar (Proposals in the Second Five-Year Plan to start).

Q.—520. Srimathi BELLARY SIDDAMMA (Davanagere).—

Will the Government be pleased to state :—

whether in Second Five Year-Plan, they have thought of starting suitable big industries at Davanagere and Harihar ?

A.—Sri H. M. CHANNABASAPPA (Minister for Industries).—

Yes. The possibility of establishing a Sugar Factory in Kodaganur-Harihar area is under examination.

ಶ್ರೀಮತಿ ಬಳ್ಳಾರಿ ಸಿದ್ದಮ್ಮ.—ತಾವು ಇಲ್ಲಿ ನನ್ನ ಪ್ರಶ್ನೆಗೆ ಉತ್ತರವಾಗಿ ಸಕ್ಕರೆ ಕಾರ್ಖಾನೆಯನ್ನು ಸ್ಥಾಪಿಸಲು ಪರಿಶೀಲನೆ ಮಾಡುತ್ತಿರುವುದಾಗಿ ತಿಳಿಸಿದ್ದೀರಿ. ಇಲ್ಲಿ ಅಂಥ ಸಕ್ಕರೆ ಕಾರ್ಖಾನೆ ತೆರೆಯಲು ಈ ಪ್ರದೇಶದಲ್ಲಿ ಕಬ್ಬಿನ ಬೆಳೆ ಸಾಕಷ್ಟು ಇದೆಯೇ ?

*ಶ್ರೀ ಎಚ್. ಎಂ. ಚನ್ನಬಸಪ್ಪ.—ಅಲ್ಲಿ ಈಗಾಗಲೇ ನಾವು ಅನೇಕ ನೀರಾವರಿ ಯೋಜನೆಗಳನ್ನು ಕೈಗೊಂಡಿದ್ದೇವೆ: ಮುಂದೆ ಅಲ್ಲಿ ಈ ಕಬ್ಬಿನ ಬೆಳೆ ವಿಶೇಷವಾಗಿ ನಡೆಯಬಹುದೆಂದು ಅಂದಾಜು ಹಾಕಿಕೊಂಡು ಅಲ್ಲಿ ಹೀಗೊಂದು ಸಕ್ಕರೆ ಕಾರ್ಖಾನೆ ಸ್ಥಾಪಿಸಿದರೆ ಅನುಕೂಲವಾದೀತೆಂದು ಆಲೋಚನೆಯಿದೆ.

ಶ್ರೀಮತಿ ಬಳ್ಳಾರಿ ಸಿದ್ದಮ್ಮ.—ಈಗ ತಾತ್ಕಾಲಿಕವಾಗಿ ಅಲ್ಲಿಯ ಜನರಿಗೆ ಅನುಕೂಲವಾಗುವಂತೆ ಅಲ್ಲಿ ಉತ್ಕೃಷ್ಟವಾದ ಮರಳು ಇರುವುದರಿಂದ ಅಲ್ಲಿ ಒಂದು ಗ್ಲಾಸ್ ಫ್ಯಾಕ್ಟರಿಯನ್ನು ತಯಾರಿಸಲು ಆಲೋಚನೆ ಮಾಡದೆ ಎಂದೋ ಆಗತಕ್ಕದ್ದನ್ನು ತಾವು ಈಗಲೇ ಏಕೆ ಆಲೋಚನೆ ಮಾಡುತ್ತಿದ್ದೀರಿ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಈಗ ತಾವು ಕೇಳಿರುವ ಅಭಿಪ್ರಾಯವನ್ನು ಪರಿಶೀಲನೆ ಮಾಡೋಣ.

ಶ್ರೀಮತಿ ಬಳ್ಳಾರಿ ಸಿದ್ದಮ್ಮ.—ಇಲ್ಲಿ Glass Factory ಸ್ಥಾಪನೆ ಮಾಡುವ ವಿಷಯದಲ್ಲಿ ಏನು ಹೇಳುತ್ತೀರಿ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅದನ್ನು ಪರಿಶೀಲನೆ ಮಾಡುತ್ತೇವೆ.

Sri M. PALANIYAPPAN.—What is the total quantity of sugarcane crop expected in that taluk ?

ಶ್ರೀ ಎಚ್. ಎಂ. ಚನ್ನಬಸಪ್ಪ.—ದಾವಣಗೆರೆಯಲ್ಲಿ ನೀರು ಕೊಡತಕ್ಕ ಪ್ರದೇಶ ಸುಮಾರು 21 ಸಾವಿರ ಎಕರೆ ಆಗುತ್ತದೆ. ಮತ್ತು ಇನ್ನೊಂದು ಪ್ರದೇಶದಲ್ಲಿ 21 ಸಾವಿರ ಎಕರೆ ಆಗುತ್ತದೆ.

Sri M. PALANIYAPPAN.—Then what is the use of Government having a Sugar Factory there when there is no sugarcane at all ?